**09, ನವೆಂಬರ್ 2017**

**ಕರದ್ ಜನತಾ ಸಹಕಾರಿ ಬ್ಯಾಂಕ್ ಲಿಮಿಟೆಡ್., ಕರದ್ ಜಿಲ್ಲೆ, ಸತ್ರಾ, ಮಹಾರಾಷ್ಟ್ರ- ಇದಕ್ಕೆ ಆರ್‌ಬಿಐ ನ ನಿರ್ದೇಶನ**

ಭಾರತೀಯ ರಿಜರ್ವ್ ಬ್ಯಾಂಕು (ಆದೇಶ DCBS.CO.BSD-I/D-4/12.22.126/2017-18 ದಿನಾಂಕ 07, ನವೆಂಬರ್ 2017 ರ ಅನ್ವಯ) ಕರದ್ ಜನತಾ ಸಹಕಾರಿ ಬ್ಯಾಂಕ್ ಲಿಮಿಟೆಡ್., ಕರದ್ ಜಿಲ್ಲೆ, ಸತ್ರಾ, ಮಹಾರಾಷ್ಟ್ರ- ಇದನ್ನು ನಿರ್ದೇಶನಗಳಿಗೆ ಒಳಪಡಿಸಿದೆ. ಈ ನಿರ್ದೇಶನಗಳ ಅನುಸಾರ ಮೇಲೆ ತಿಳಿಸಿದ ಬ್ಯಾಂಕಿನ ಠೇವಣಿದಾರರು ತಮ್ಮ (ಉಳಿತಾಯ/ಚಾಲ್ತಿ) ಖಾತೆಯಿಂದ ರೂ. 1000 ಕ್ಕಿಂತ ಹೆಚ್ಚು ಹಣವನ್ನು ಹಿಂಪಡೆಯಲು ಅವಕಾಶವಿರುವುದಿಲ್ಲ. ಕರದ್ ಜನತಾ ಸಹಕಾರಿ ಬ್ಯಾಂಕ್ ಲಿಮಿಟೆಡ್, ಭಾರತೀಯ ರಿಜರ್ವ್ ಬ್ಯಾಂಕಿನ ಲಿಖಿತ ಅನುಮತಿಯಿಲ್ಲದೆ ಸಾಲ ನೀಡುವ/ನವೀಕರಿಸು ವಂತಿಲ್ಲ, ಹಣ ಹೂಡಿಕೆ ಮಾಡುವಂತಿಲ್ಲ, ಯಾವುದೇ ಹೊಣೆಗಾರಿಕೆಯಲ್ಲಿ (ಸಾಲ ತೆಗುದುಕೊಳ್ಳುವುದು ಅಥವಾ ಹೊಸ ಠೇವಣಿ ತೆಗೆದುಕೊಳ್ಳುವುದು) ಭಾಗಿಯಾಗುವಂತಿಲ್ಲ, ತನ್ನ ಹೊಣೆಗಾರಿಕೆಯ ಸಲುವಾಗಿ ಯಾವುದೇ ಪಾವತಿ ಮಾಡುವ/ ಪಾವತಿ ಮಾಡಲು ಒಪ್ಪಿಕೊಳ್ಳುವ ಹಾಗಿಲ್ಲ, 07 ನವೆಂಬರ್ 2017 ರ ಆರ್‌ಬಿಐ ನ ನಿರ್ದೇಶನದಲ್ಲಿ ಸೂಚಿಸಿದ ಅಂಶಗಳನ್ನು ಹೊರೆತು ಪಡಿಸಿ ಯಾವುದೇ ಆಸ್ತಿ/ ಸೊತ್ತನ್ನು ಮಾರುವ/ ವಿಲೇವಾರಿ ಮಾಡುವ ಯಾವುದೇ ಒಪ್ಪಂದ ಕೈಗೊಳ್ಳುವ ಹಾಗಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕಿನಿಂದ ಆದ ಮಾರ್ಗದರ್ಶನಗಳ ನೀಡಿಕೆ ಬ್ಯಾಂಕಿಂಗ್ ಪರವಾನಗಿ ರದ್ದು ಎಂದು ಅರ್ಥೈಸಿಕೊಳ್ಳಬಾರದು . ಬ್ಯಾಂಕ್ ತನ್ನ ಹಣಕಾಸಿನ ಸ್ಥಿತಿಯಲ್ಲಿ ಸುಧಾರಣೆ ಆಗುವ ತನಕ ನಿರ್ಬಂಧಗಳೊಂದಿಗೆಬ್ಯಾಂಕಿಂಗ್ ವ್ಯವಹಾರ ಮಾಡುತ್ತದೆ. ಸಂದರ್ಭಗಳನ್ನು ಅವಲಂಬಿಸಿ ರಿಸರ್ವ್ ಬ್ಯಾಂಕ್ ಈ ಮಾರ್ಗದರ್ಶನಗಳ ಬದಲಾವಣೆಗಳನ್ನು ಪರಿಗಣಿಸಬಹುದು.

ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ 1949 ಕಲಂ 35A ರ ಉಪ ಕಲಂ (1), ಕಲಂ 56 ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಭಾರತೀಯ ರಿಸರ್ವ್ ಬ್ಯಾಂಕ್ ಈ ಮಾರ್ಗದರ್ಶನಗಳನ್ನು ವಿಧಿಸಿದೆ. ನಿರ್ದೇಶನದ ಒಂದು ಪ್ರತಿಯನ್ನು ಬ್ಯಾಂಕ್ ಆವರಣದಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ.

**ಅಜಿತ್ ಪ್ರಸಾದ್**
ಸಹಾಯಕ ಸಲಹೆಗಾರರು

**ಪತ್ರಿಕಾ ಪ್ರಕಟಣೆ : 2017-2018/1292**